


ಚಿತ್ರಗಳು: ಸೃಜನ್

ಈ ಕಾಲದ ಕಥನ

ಭಾರತೀ ದೇವಿ ಪಿ.

# ಅರಸುವ ಗೋಜಲು...

ದಿನ ಬೆಳಗಾದರೆ ವಾಟ್ಸ್‌ಆ್ಯಪ್, ಫೇಸ್‌ಬುಕ್ ತೆಗೆದು ನೋಡಿದೊಡನೆ ಅಸಂಖ್ಯ ಕತೆಗಳು, ವಿಚಾರಗಳು, ಹಸಿಬಿಸಿ ಸುದ್ದಿಗಳು ನಮ್ಮೆಡೆಗೆ ಟಪಟಪನೆ ಬೀಳುತ್ತಿರುವ ಈ ಕಾಲಘಟ್ಟದಲ್ಲಿ ಇವುಗಳಲ್ಲಿ ನಮಗೆ ಬೇಕಾದವು ಯಾವುವು, ಬೇಡದವು ಯಾವವು ಎಂದು ನಿರ್ಧರಿಸುವುದಕ್ಕೂ ನಮಗೆ ಸಮಯವಾಗಲೀ, ಅವಕಾಶವಾಗಲೀ ಇಲ್ಲ. ಎಲ್ಲ ಕಥನಗಳೂ ಜಾಗ ಪಡೆಯುತ್ತಿರುವ ಮತ್ತು ಪ್ರಶ್ನೆಗೆ ಒಳಗಾಗುತ್ತಿರುವ ಸಂದರ್ಭದಲ್ಲಿ ನಾವಿದ್ದೇವೆ. ಕಥನ ಎಂದರೆ ಕತೆ ಎನ್ನುವುದರಾಚೆಗೆ ಚಿಂತನಾ ಘಟಕ, ಒಂದು ವಾಗ್ವಾದ ಎನ್ನುವ ನೆಲೆಯಲ್ಲಿ ನಾವು ಅರ್ಥೈಸಿಕೊಂಡಿದ್ದೇವೆ.